

ವಸ್ತ್ರಸಂಹಿತೆ ಉಲ್ಲಂಘಿಸಿಲ್ಲ ಎನ್ನುವುದಕ್ಕೆ ಹೊಸ ಉಪಾಯ. ಮೈತುಂಬ ರಂಗುರಂಗಿನ ಉಡುಪಿನಂಥ ಹಚ್ಚೆ ಹಾಕಿಸಿಕೊಂಡರಾಯ್ತು, ಉಡುಪೆಲ್ಲಿ ಎಂದು ಮಾರಲ್ ಪೊಲೀಸರು ಕೇಳುವ ಹಾಗಿಲ್ಲ, ವಸ್ತ್ರದ ಅಲರ್ಜಿ ಇರುವವರಿಗೂ ಸಖತ್ ಖುಷಿ. ಬೊಗೊಟಾದಲ್ಲಿ ನಡೆದ ಅಂತರರಾಷ್ಟ್ರೀಯ ಹಚ್ಚೆ ಸಮ್ಮೇಳನದಲ್ಲಿ ಕಂಡ ವಸ್ತ್ರರಹಿತ ವೈಭವದ ತುಣುಕಿದು.

ವಿಮಾನ ಪಯಣಕ್ಕೆ ಹೆಚ್ಚೆಂದರೆ ಎಷ್ಟು ಗಂಟೆ, ಎಷ್ಟು ದಿನ ಕಾಯಬಹುದು? ಅಮೆರಿಕದ ಈ ಡೊಮಿನಿಕ್ ಲಯೋನಿಸ್ ಬರೋಬ್ಬರಿ 6 ತಿಂಗಳು ಕಾದಳು, ವಿಮಾನದಲ್ಲಿ ಸೀಟಿಗಾಗಲ್ಲ, ಮಂಚಕ್ಕಾಗಿ. 226 ಕೆಜಿ ತೂಗುವ ಈ 'ಭಾರ'ಮ್ಮನನ್ನು ಹೊರಲು ಮಿಲಿಟರಿ ವಿಮಾನ ಡೊಮಿನಿಕ್ ಗಣರಾಜ್ಯಕ್ಕೆ ಕೊನೆಗೂ ಧಾವಿಸಿದಾಗ ಡೊಮಿನಿಕ್‌ನ ಆಕೆಯ ಅಜ್ಜಿಯ ಮನೆ 226 ಕೆಜಿ ಭಾರ ಕಳೆದುಕೊಂಡಿತು.



ಬ್ರಿಟಿಷರು ಕೆಟ್ಟದಾಗಿ ಉಡುಪು ತೊಡುವವರಲ್ಲಿ ಮೊದಲಿಗರಂತೆ, ಅದೂ ಪ್ರವಾಸ ಮಾಡುವ ಸಂದರ್ಭದಲ್ಲಿ. ಶೂ ಬದಲು ಸ್ಯಾಂಡಲ್ಸ್ ತೊಟ್ಟರೂ ಕಾಲುಚೀಲ ಹಾಕಿಕೊಳ್ಳುತ್ತಾರೆ, ಬನಿಯನ್‌ನಲ್ಲೇ ಬೀದಿಯೆಲ್ಲ ಸುತ್ತುತ್ತಾರೆ ಎನ್ನುತ್ತದೆ ಸಮೀಕ್ಷೆ. ನಂತರದ ಸ್ಥಾನ ಜರ್ಮನ್ನರದ್ದು. ಪ್ರವಾಸ ಹೊರಡುವುದು ಪ್ರೇಕ್ಷಣೀಯ ಸ್ಥಳ ನೋಡಲೆಂದು, ನಮ್ಮನ್ನು ಇತರರು ನೋಡಲೆಂದಲ್ಲ ಎಂದು ಸಮೀಕ್ಷಾ ವರದಿ ನೋಡಿದವರು ಗರಂ ಆಗಿದ್ದು ಗೊತ್ತಾಗಿಲ್ಲ.

ವಿಶ್ವಸಂಸ್ಥೆಯ 'ವಿಶ್ವ ಕಡಲ ದಿನ' ಹಾಗೆ ಬಂದು ಹೀಗೆ ಹೋಯ್ತು. ಆದರೆ ಮ್ಯಾಗ್ನೆಟಿಕ್ ದ್ವೀಪದಲ್ಲಿ ಮ್ಯಾಗ್ನೆಟಿಕ್‌ನಂತೆ ಸೆಳೆಯುವ 'ಸ್ಕಿನ್ ಡೀಪ್' ಸ್ಪರ್ಧೆ ನಡೆಯಿತು. ಸ್ಪರ್ಧೆಯ ನಿಯಮಗಳನ್ನು ನೀರಿನಲ್ಲಿ ಬಿದ್ದ ಈ ಜೋಡಿಯ ಪ್ರತಿಬಿಂಬ ನೋಡಿಯೇ ತಿಳಿಯಬಹುದು.



ವಾಷಿಂಗ್ಟನ್‌ನ ಬ್ಯಾಂಕ್ ಒಂದರಲ್ಲಿ 'ದರೋಡೆಕೋರ' ಸಿಕ್ಕಿಬಿದ್ದ. ಹೊರಗಡೆಯ ಬಾಗಿಲು ಮುರಿದು ಒಳಹೊಕ್ಕಿದ್ದ ಆತನನ್ನು ಪೊಲೀಸರು ಬಂಧಿಸಿದರು. ಕದ್ದ ಹಣವೆಲ್ಲಿ ಎಂದರೆ ಹಣವನ್ನೇ ಆತ ಮುಟ್ಟಿರಲಿಲ್ಲ. ಅಷ್ಟಕ್ಕೂ ಆ ವ್ಯಕ್ತಿಗೆ ಬೇಕಾದ್ದೇನು? ಸುಖ ನಿದ್ರೆ ಹೊಡೆಯಲೊಂದು ಜಾಗ! ಕುಡುಕನಿಗೆ ನಿದ್ರೆ ಬಂತು, ನಿದ್ರೆ ಮಾಡಲು ಬ್ಯಾಂಕ್ ಪ್ರಶಸ್ತವಾದ ಜಾಗ ಎನಿಸಿತು.



ಮುದ್ದು ನಾಯಿಗೆ ಕ್ಯಾಟ್‌ವಾಕ್ ಕಲಿಸಿದ ಮಂದಿ ಈಗ ಸ್ಕೇಟಿಂಗ್ ಕಲಿಸ ಹೊರಟಿದ್ದಾರೆ. ಸ್ಕೇಟಿಂಗ್ ಬೋರ್ಡ್ ಕಟ್ಟಿಕೊಂಡ ನಾಯಿಯದ್ದೇ ಮಾತು ಬೋಜ್‌ಮನ್ ಮೌಂಟ್‌ನಲ್ಲಿ. ಆದರೆ ನಾಯಿ ಸ್ಕೇಟಿಂಗ್ ಬೋರ್ಡ್ ಎಳೆಯುತ್ತ ಸಾಗುವ ರಹಸ್ಯ ಬೋರ್ಡ್‌ನ ಮುಂಭಾಗದಲ್ಲೇ ಇದೆ. ಅಲ್ಲಿರುವ ಕುಕೀಸ್ ಇಟ್ಟಿದ್ದು ಜಾಣ ನಾಯಿಯ ಜಾಣ ಒಡತಿ.



ಫುಟ್‌ಬಾಲ್ ಪಂದ್ಯ ಬೇರೆ ಕಡೆ ನಡೆದಿದ್ದರೆ ಚೀಯರ್ ಹುಡುಗಿಯರನ್ನು ದುಡ್ಡು ಕೊಟ್ಟು ಕರೆಸಬೇಕಿತ್ತು. ಆದರೆ ದ.ಆಫ್ರಿಕಾದಲ್ಲಿ ಸಂಘಟಕರು ತಲೆ ಓಡಿಸಿದ್ದಾರೆ. ಸ್ಥಳೀಯ ಬುಡಕಟ್ಟು ಜನರಿಗೆ ಪಂದ್ಯಗಳಿಗೆ ಉಚಿತ ಪ್ರವೇಶ ನೀಡಿದ್ದಾರೆ. ಒಂದೇ ಕಲ್ಲಿಗೆ ಎರಡು ಹಕ್ಕಿಗಳು!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65